ದಿನಾಂಕಃ **21.06.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಆರ್.ವಿ ರವರಿಂದಃ

ದಾವಾ ಸ್ವತ್ತು ಹೌಸಿಂಗ್ ಸೊಸೈಟೀ ರವರಿಂದ ವಾದಿಗೆ ಮಂಜೂರು ಆಗಿರುತ್ತದೆ. ಸದರಿ ಹೌಸಿಂಗ್ ಸೊಸೈಟೀ ವ್ಯವಹಾರದ ಸಂಪೂರ್ಣ ಮಾಹಿತಿ ನನಗೆ ಇರುವುದಿಲ್ಲ. ಭಾರತ ಸರ್ವೂಚ್ಚ ನ್ಯಾಯಾಲಯದಿಂದ **4** ನೇ ಪ್ರತಿವಾದಿ ಹೌಸಿಂಗ್ ಸೊಸೈಟೀರವರು ಮಂಜೂರು ಮಾಡಿರುವ ಸೈಟುಗಳ ಸಂಬಂಧಿಸಿದ ಭೂ ಸ್ವಾಧೀನ ಪ್ರಕ್ರಿಯೇಯನ್ನು ರದ್ದುಗೊಳಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸೈಟ್ ನಂ.**83** ನಿವೇಶನವನ್ನು ಸರ್ವೆ ನಂ.**42/3** ಬಿ ಮತ್ತು **42/3** ಎ ರಲ್ಲಿ ಜಮೀನುಗಳನ್ನು ವಿಂಗಡನೆ ಮಾಡಲಾಗಿರುತ್ತದೆ. ನಾನು ಪ್ರತಿವಾದಿಯ ವಿರುದ್ಧ ಸೈಟ್ ನಂ.**42/3** ಎ ಜಮೀನಿನಲ್ಲಿ ಗಂಡೆನೆ ಮಾಡಲಾಗಿರುತ್ತದೆ ಎಂದು ಪೊಲೀಸರ ಮುಂದೆ ದೂರು ನೀಡಿರುತ್ತೇನೆ ಎಂದರೆ ಸಾಕ್ಷಿಯು ಆ ಕಾಲಕ್ಕೆ ನನಗೆ ಸರ್ವೆ ನಂಬರ್ ಬಗ್ಗೆ ಮನವರಿಕೆ ಇರಲಿಲ್ಲ ಎಂದು ನುಡಿಯುತ್ತಾರೆ. **4** ನೇ ಪ್ರತಿವಾದಿ ಹೌಸಿಂಗ್ ಸೊಸೈಟಿರವರು ಎಷ್ಟನೇ ಸೈಟ್ ನ್ನು ಯಾವ ಸರ್ವೆ ನಂಬರ್ ಜಮೀನಿನಲ್ಲಿ ವಿಂಗಡೆನೆ ಮಾಡಲಾಗಿರುತ್ತದೆ ಎನ್ನುವ ಬಗ್ಗೆ ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಾಹಿತಿಯ ಆಧಾರ ಮೇಲೆ ನಾನು ಘನ ಉಚ್ಚ ನ್ಯಾಯಾಲಯದ ಮುಂದೆ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ರಿಟ್ ಅರ್ಜಿಯಲ್ಲ ಸೈಟ್ ನಂ.**83** ಮತ್ತು ಪಕ್ಕದ ಸೈಟ್ ನಂ.**82** ನಿವೇಶನಗಳನ್ನು ಸರ್ವೆ ನಂ.**42/3** ಎ ಜಮೀನಿನಲ್ಲಿ

ವಿಂಗಡನೆ ಮಾಡಲಾಗಿರುತ್ತದೆ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ಮೂಲ ದಾವೆ ಸಂ.**3520/2012** ರ ಪ್ರಕರಣದ ದಾವಾ ಪತ್ರದಲ್ಲಿ ಸೈಟ್ ನಂ.**83** ಮತ್ತು ಪಕ್ಕದ ಸೈಟ್ **82** ನಿವೇಶನಗಳನ್ನು ಸರ್ವೆ ನಂ.**42/3** ಎ ಜಮೀನಿನಲ್ಲಿ ವಿಂಗಡನೆ ಮಾಡಲಾಗಿರುತ್ತದೆ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಬರೆಸಿರಬಹುದು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸೈಟ್ ನಂ.**84.** ದಾವಾ ಸೈಟನ್ನು ಸರ್ವೆ ನಂ.**42/3** ಬಿ ಜಮೀನಿನಲ್ಲಿ ವಿಂಗಡನೆ ಮಾಡಲಾಗಿರುತ್ತದೆ ಎಂದು ವಾದಿಯು ತಮ್ಮ ವಾದ ಪತ್ರದಲ್ಲಿ ಹೇಳಿ ಬರೆಸಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸರ್ವೆ ನಂ.**42/3** ಎ ಮತ್ತು **42/3** ಬಿ ಜಮೀನಿನ ಭೂ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ಸರ್ವೆ ನಂ.**42/3** ಬಿ ಜಮೀನು ಮೂಲತವಾಗಿ ಕಿಡಿಯಪ್ಪ ಎನ್ನುವವರಿಗೆ ಸೇರಿತ್ತು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಕಿಡಿಯಪ್ಪನ ಮರಣ ನಂತರ ಕಿಡಿಯಪ್ಪನ ಹೆಂಡತಿ ಮತ್ತು ಮಕ್ಕಳು ಸರ್ವೆ ನಂ.**42/3** ಬಿ ಜಮೀನನ್ನು **2** ನೇ ಪ್ರತಿವಾದಿ ವಿ.ನಾಗರಾಜ್ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.ಸರ್ವೆ ನಂ.**42/3** ಬಿ ಜಮೀನಿನ ಜಮೀನಿಗೆ ಸಂಬ್ಬಂಸಿದ ಪರಿಹಾರದ ಹಣವನ್ನು ಕಿಡಿಯಪ್ಪ ರವರು ಅವರ ಜೀವಿತ ಕಾಲದಲ್ಲಿ ಸರ್ಕಾರಕ್ಕೆ ಮರು ಪಾವತಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೂಲ ದಾವೆ ನಂ.**3520/2012** ರ ಪ್ರಕರಣದ ಪ್ರತಿವಾದಿಗಳು ಪ್ರಶ್ನಿಸಿರಲಿಲ್ಲ ಮತ್ತು ಸದರಿ ಪ್ರಕರಣದಲ್ಲಿ ದಾವೆಯು ಏಕಪಕ್ಷಿವಾಗಿ ಡಿಕ್ರಿಗೊಂಡಿರುತ್ತದೆ ಎಂದರೆ ಸರಿಯಲ್ಲ. ಆರ್.ಎಫ್.ಎ **196/2014** ರಲ್ಲಿ ಉಚ್ಚ ನ್ಯಾಯಾಲಯವು ನನಗೆ ಒಂದು ನಿರ್ದೇಶವನ್ನು ನೀಡಿ ಬೇರೆ ಒಂದು

ದಾವೆಯನ್ನು ದಾಖಲಿಸಲು ಸೂಚಿಸಿದರು ಎಂದರೆ ಸಾಕ್ಷಿಯು ಸದರಿ ಆರ್.ಎಫ್.ಎ ನ್ನು ಹಿಂದಕ್ಕೆ ತೆಗೆದುಕೊಂಡಿರುತ್ತೇನೆ ಎಂದು ಹೇಳುತ್ತಾರೆ. ಮೂಲ ಸಂ.**3520/2012** ಪ್ರಕರಣವನ್ನು ನಾನು ನನ್ನ ಸ್ವತ್ತಿಗೆ ಸಂಬಂಧಿಸಿ ನಿರ್ಭಂದಕಾಜ್ಞೆ ಮತ್ರ ಕೋರಿ ಸಲ್ಲಿಸಿದೆ. ಆರ್.ಎಫ್.ಎ **196/2014** ನ್ನು ನಾನು ಹಿಂದಕ್ಕೆ ಪಡೆದುಕೊಂಡ ನಂತರ ಈ ಪ್ರಕರಣದ **2** ನೇ ಪ್ರತಿವಾದಿಯು ಮೂಲ ದಾವೆ ಸಂ.**39/2023** ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸ್ಟೈಟ್ ನಂ.**83** ಸರ್ವೆ ನಂ.**42/3** ಎ ನಲ್ಲಿ ವಿಂಗಡನೆ ಮಾಡಿರುವುದರಿಂದ ಸದರಿ ಸ್ವತ್ತಿಗೂ ಮತ್ತು **2** ನೇ ಪ್ರತಿವಾದಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿ ಈ ದಾಖಲೆಯಲ್ಲಿ ನೀಡಿರುವ ಮಾಹಿತಿಯಂತೆ ಯಾವ ಸೈಟ್ ?ಯಾವ ಸರ್ವೆ ನಂಬರ್ ಜಮೀನಿನಲ್ಲಿ ವಿಂಗಡನೆ ಮಾಡಿರುತ್ತಾರೆ ಎಂದು ನೀಡಿರುವ ಮಾಹಿತಿ ಪತ್ರ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಒಂದು ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು ನಿಡಿ-**1** ಎಂದು ಗುರುತಿಸಲಾಯಿತು. ನನಗೂ ಮತ್ತು ಸರ್ವೆ ನಂ.**42/3** ಬಿ ಜಮೀನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸೈಟ್ ನಂ.**84** ಸರ್ವೆ ನಂ.**42/3** ಬಿ ಜಮೀನಿನಲ್ಲಿ ವಿಂಗಡನೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಸೈಟ್ ನಂ.**84** ನ್ನು ಸರ್ವೆ ನಂ.**42/3** ಬಿ ಜಮೀನಿನಲ್ಲಿ ವಿಂಗಡನೆ ಮಾಡಿರುವ ಎಲ್ಲಾ ಮಾಹಿತಿ ಇದ್ದರು ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ವಾದಿಗೆ ಅನಾನುಕೂಲವಾದರೆ ವಾದಿಗೆ ಅನಾನುಕೂಲವಾಗುತ್ತದೆ. ವಾದಿ ನನ್ನ ಸಂಬಂಧಿ ಅಲ್ಲ, ಆದರೆ ನನ್ನ ಪಕ್ಕದ

**ಸೈಟಿನ ಮಾಲೀಕರು. ವಾದಿಯು ನನ್ನ ಪಕ್ಕದ ಸೈಟಿನ ಮಾಲೀಕರು ಇದ್ದು ವಾದಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.**

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

**ಓ. ಹೇ.ಕೇ.ಸ.ಇದೆ.**

**(ಓಂಕಾರಪ್ಪ. ಆರ್.)**
**5 ನೇ ಅ.ನ.ಸಿ.ಸಿ. ನ್ಯಾಯಾಧೀಶರು,**
**ಬೆಂಗಳೂರು ನಗರ.**